**A** | **CCE RF/RR/ PF/PR**

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಮೇ 2026 ರ ಪರೀಕ್ಷೆ - 2**
**MAY 2026 EXAMINATION - 2**

## ಮಾದರಿ ಉತ್ತರಗಳು
## MODEL ANSWERS

ಸಂಕೇತ ಸಂಖ್ಯೆ : **83-K** CODE NO. : **83-K**

## ವಿಷಯ : ವಿಜ್ಞಾನ
## Subject : SCIENCE

(ಭೌತ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಜೀವ ವಿಜ್ಞಾನ / **Physics, Chemistry & Biology**)

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)

(**Regular Fresh / Regular Repeater / Private Fresh / Private Repeater**)

(ಕನ್ನಡ ಮಾಧ್ಯಮ / **Kannada Medium**)

(ಭೌತ ವಿಜ್ಞಾನ / **Physics**)

ದಿನಾಂಕ : **19. 05. 2026** ] [ ಗರಿಷ್ಠ ಅಂಕಗಳು : **80**

**Date : 19. 05. 2026** ] [ **Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | **ಭಾಗ – A** <br> **( ಭೌತ ವಿಜ್ಞಾನ )** | |
| **I.** | **ಬಹು-ಆಯ್ಕೆ ಪ್ರಶ್ನೆಗಳು : 2 × 1 = 2** | |
| 1. | ವಿದ್ಯುತ್‌ಪ್ರವಾಹದ SI ಏಕಮಾನವು <br> (A) ಆಂಪೀರ್ (B) ಓಮ್ <br> (C) ವೋಲ್ಟ್ (D) ವ್ಯಾಟ್ <br> *ಉತ್ತರ :* (A) ಆಂಪೀರ್ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | ಬೆಳಕಿನ ಕಿರಣವು ಸಾಂದ್ರ ಮಾಧ್ಯಮದಿಂದ ವಿರಳ ಮಾಧ್ಯಮಕ್ಕೆ ಓರೆಯಾಗಿ ಪ್ರವೇಶಿಸಿದರೆ, ಆಗ ವಿರಳ ಮಾಧ್ಯಮದಲ್ಲಿ ಆ ಬೆಳಕಿನ ಕಿರಣದ ವೇಗ ಮತ್ತು ಬಾಗುವಿಕೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆ<br>(A) ವೇಗ ಕಡಿಮೆಯಾಗುತ್ತದೆ ಮತ್ತು ಲಂಬದ ಕಡೆಗೆ ಬಾಗುತ್ತದೆ<br>(B) ವೇಗ ಹೆಚ್ಚಾಗುತ್ತದೆ ಮತ್ತು ಲಂಬದಿಂದ ದೂರಕ್ಕೆ ಬಾಗುತ್ತದೆ<br>(C) ವೇಗ ಕಡಿಮೆಯಾಗುತ್ತದೆ ಮತ್ತು ಲಂಬದಿಂದ ದೂರಕ್ಕೆ ಬಾಗುತ್ತದೆ<br>(D) ವೇಗ ಹೆಚ್ಚಾಗುತ್ತದೆ ಮತ್ತು ಲಂಬದ ಕಡೆಗೆ ಬಾಗುತ್ತದೆ<br>***ಉತ್ತರ :*** (B) ವೇಗ ಹೆಚ್ಚಾಗುತ್ತದೆ ಮತ್ತು ಲಂಬದಿಂದ ದೂರಕ್ಕೆ ಬಾಗುತ್ತದೆ | 1 |
| **II.** | **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 2 × 1 = 2** | |
| 3. | ಒಂದು ವಿದ್ಯುತ್‌ಮಂಡಲದಲ್ಲಿ ಉಪಯೋಗಿಸುವ ಸೇರ್ಪಡೆಯಿಲ್ಲದೆ ದಾಟಿದ ತಂತಿಯ ಚಿಹ್ನೆಯ ಚಿತ್ರವನ್ನು ಬರೆಯಿರಿ.<br>***ಉತ್ತರ :***<br> | 1 |
| 4. | ಕೆಳಗಿನ ಚಿತ್ರವನ್ನು ಗಮನಿಸಿ. ಸ್ವಿಚ್ ಆನ್ ಮಾಡಿದಾಗ, ಸೊಲೆನಾಯ್ಡ್‌ನ *Y* ತುದಿಯು ದಂಡಕಾಂತದ *S* ಧ್ರುವವನ್ನು ವಿಕರ್ಷಿಸುವುದೇ ? ಉತ್ತರವನ್ನು ಸ್ಪಷ್ಟಪಡಿಸಿ.<br><br>***ಉತ್ತರ :***<br>ಇಲ್ಲ / ಅದು ವಿಕರ್ಷಿಸುವುದಿಲ್ಲ / ಇದು *S* ಧ್ರುವವನ್ನು ಆಕರ್ಷಿಸುತ್ತದೆ. ½<br>ಕಾರಣ, ಸೊಲೆನಾಯ್ಡ್‌ನ *Y* ತುದಿಯು ಉತ್ತರ ಧ್ರುವದಂತೆ ವರ್ತಿಸುತ್ತದೆ. ½ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| III. | **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **3 × 2 = 6** | |
| 5. | ಬಿಳಿ ಬೆಳಕಿನ ರೋಹಿತದ ಪುನರ್‌ಸಂಯೋಜನೆಯನ್ನು ತೋರಿಸುವ ನ್ಯೂಟನ್‌ರ ಪ್ರಯೋಗವನ್ನು ವಿವರಿಸಿ.<br>***ಉತ್ತರ:***<br>★ ನ್ಯೂಟನ್‌ರವರು ಒಂದು ಗಾಜಿನ ಪಟ್ಟಕವನ್ನು ಉಪಯೋಗಿಸಿ ಬಿಳಿ ಬೆಳಕಿನ ರೋಹಿತವನ್ನು ಪಡೆದರು. ನಂತರ ಸಮರೂಪಿಯಾದ ಮತ್ತೊಂದು ಪಟ್ಟಕವನ್ನು ಮೊದಲನೇ ಪಟ್ಟಕಕ್ಕೆ ವಿರುದ್ಧ ದಿಕ್ಕಿನಲ್ಲಿ ತಲೆಕೆಳಗಾಗಿ ಇರಿಸಿ ರೋಹಿತವನ್ನು ಅದರ ಮೂಲಕ ಹಾಯಿಸಿದರು. 1<br>★ ಬಿಳಿಯ ಬೆಳಕಿನ ಕಿರಣವು ಎರಡನೇ ಪಟ್ಟಕದ ಮತ್ತೊಂದು ಬದಿಯಿಂದ ಹೊರಹೊಮ್ಮುವುದನ್ನು ಕಂಡುಕೊಂಡರು. ಇದು ಬಿಳಿಯ ಬೆಳಕಿನ ರೋಹಿತದ ಪುನರ್ ಸಂಯೋಜನೆಯನ್ನು ತೋರಿಸುತ್ತದೆ. 1 | 2 |
| 6. | ಭೂಸಂಪರ್ಕ ತಂತಿಯ ಕಾರ್ಯವೇನು ? ಗೃಹ ವಿದ್ಯುತ್‌ಮಂಡಲದಲ್ಲಿ ಓವರ್‌ಲೋಡ್ ತಪ್ಪಿಸಲು ತೆಗೆದುಕೊಳ್ಳಬಹುದಾದ ಯಾವುದಾದರೂ ಎರಡು ಮುನ್ನೆಚ್ಚರಿಕೆಯ ಕ್ರಮಗಳನ್ನು ತಿಳಿಸಿ.<br>***ಉತ್ತರ:***<br>ಭೂಸಂಪರ್ಕ ತಂತಿಯು ವಿದ್ಯುತ್ ಉಪಕರಣಗಳಲ್ಲಿ ವಿದ್ಯುತ್ ಸೋರಿಕೆ ಉಂಟಾದಾಗ ಅವುಗಳ ವಿಭವಾಂತರವನ್ನು ಭೂಮಿಯ ವಿಭವಾಂತರಕ್ಕೆ ಸಮನಾಗಿಸುತ್ತದೆ / ಕಡಿಮೆ ರೋಧವನ್ನು ಹೊಂದಿರುವ ವಿದ್ಯುತ್‌ಪ್ರವಾಹದ ಪಥವನ್ನು ಉಂಟುಮಾಡುತ್ತದೆ. 1<br>*ಓವರ್‌ಲೋಡ್ ತಪ್ಪಿಸಲು ಮುನ್ನೆಚ್ಚರಿಕೆ ಕ್ರಮಗಳು :*<br>★ ವಿದ್ಯುತ್‌ಮಂಡಲದಲ್ಲಿ ಫ್ಯೂಸ್ ಅನ್ನು ಬಳಸಬೇಕು.<br>★ ಸಜೀವ ಮತ್ತು ತಟಸ್ಥ ತಂತಿಗಳು ನೇರ ಸಂಪರ್ಕವಾಗುವುದನ್ನು ತಪ್ಪಿಸಬೇಕು.<br>★ ತಂತಿಗಳ ಮೇಲಿನ ಅವಾಹಕ ಹೊದಿಕೆ ಹಾನಿಗೊಳಗಾಗುವುದನ್ನು ತಪ್ಪಿಸುವುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ★ ವಿದ್ಯುತ್ ಉಪಕರಣಗಳಲ್ಲಿ ಯಾವುದಾದರೂ ದೋಷವಿದ್ದರೆ ಅದನ್ನು ಸರಿಪಡಿಸಬೇಕು.<br>★ ಹಲವು ಉಪಕರಣಗಳನ್ನು ಒಂದೇ ಸಾಕೆಟ್‌ಗೆ ಜೋಡಿಸಬಾರದು.<br>(ಯಾವುದಾದರೂ ಎರಡು) $2 \times \frac{1}{2}$ | 2 |
| 7. | ಒಂದು ವಿದ್ಯುತ್‌ಮಂಡಲದಲ್ಲಿ $2\,\Omega$ ಮತ್ತು $4\,\Omega$ ರೋಧಕಗಳನ್ನು ಸಮಾಂತರವಾಗಿ ಜೋಡಿಸಲಾಗಿದೆ. $4\,\Omega$ ಬದಲಿಗೆ $6\,\Omega$ ನ ರೋಧಕವನ್ನು ಬಳಸಿದರೆ, ಆಗ ಈ ಎರಡೂ ಜೋಡಣೆಗಳಲ್ಲಿ ದೊರಕಿದ ಒಟ್ಟು ರೋಧಗಳ ನಡುವಣ ವ್ಯತ್ಯಾಸವನ್ನು ಕಂಡುಹಿಡಿಯಿರಿ.<br>***ಉತ್ತರ :***<br>$R_1 = 2\,\Omega$<br>$R_2 = 4\,\Omega$<br>$\frac{1}{R_{p_1}} = \frac{1}{R_1} + \frac{1}{R_2}$<br>$= \frac{1}{2} + \frac{1}{4}$<br>$= \frac{2+1}{4}$<br>$\frac{1}{R_{p_1}} = \frac{3}{4}$<br>ಆದ್ದರಿಂದ $R_{p_1} = \frac{4}{3} = 1\cdot33\,\Omega$ 1<br>ಈಗ, $R_1 = 2\,\Omega$<br>$R_2 = 6\,\Omega$<br>$\frac{1}{R_{p_2}} = \frac{1}{R_1} + \frac{1}{R_2}$<br>$= \frac{1}{2} + \frac{1}{6}$<br>$= \frac{3+1}{6}$<br>$\frac{1}{R_{p_2}} = \frac{4}{6}$ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಆದ್ದರಿಂದ $R_{p_2} = \frac{6}{4} = 1\cdot5\ \Omega$ | |
| | $R_{p_2} - R_{p_1} = 1\cdot5 - 1\cdot33$ ½ | |
| | $= 0\cdot17\ \Omega$ ½ | 2 |
| **IV.** | **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 3 × 3 = 9** | |
| 8. | ಒಂದು ವಸ್ತುವನ್ನು ನಿಮ್ನ ದರ್ಪಣದ '*C*' ಮತ್ತು '*F*' ಗಳ ನಡುವೆ ಇರಿಸಿದಾಗ ಪ್ರತಿಬಿಂಬ ಉಂಟಾಗುವಿಕೆಯ ರೇಖಾಚಿತ್ರವನ್ನು ಬರೆಯಿರಿ. ಉಂಟಾಗುವ ಪ್ರತಿಬಿಂಬದ ಸ್ಥಾನ ಮತ್ತು ಗಾತ್ರವನ್ನು ತಿಳಿಸಿ. [ *C* : ವಕ್ರತಾ ಕೇಂದ್ರ; *F* : ಪ್ರಧಾನ ಸಂಗಮ ] | |
| | ***ಉತ್ತರ :*** | |
| | ನಿಮ್ನ ದರ್ಪಣದ '*C*' ಮತ್ತು '*F*' ಗಳ ನಡುವೆ ಇರಿಸಿದ ವಸ್ತುವಿನ ಪ್ರತಿಬಿಂಬದ ರೇಖಾಚಿತ್ರ | |
| |  | |
| | ★ ದರ್ಪಣ ½ | |
| | ★ ವಸ್ತುವಿನ ನಿಖರ ಸ್ಥಾನ ½ | |
| | ★ ಪ್ರತಿಬಿಂಬದ ನಿಖರ ಸ್ಥಾನ ½ | |
| | ★ ಸಮರ್ಪಕ ರೇಖೆಗಳು ½ | |
| | ಪ್ರತಿಬಿಂಬದ ಸ್ಥಾನ — *C* ಯಿಂದ ದೂರದಲ್ಲಿ ಉಂಟಾಗುತ್ತದೆ. ½ | |
| | ಪ್ರತಿಬಿಂಬದ ಗಾತ್ರ — ದೊಡ್ಡದಾದ ½ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 9. | a) ವಾತಾವರಣದಲ್ಲಿ ಕಾಮನಬಿಲ್ಲು ಹೇಗೆ ಉಂಟಾಗುತ್ತದೆ ? ವಿವರಿಸಿ.<br>b) ಟಿಂಡಾಲ್ ಪರಿಣಾಮ ಎಂದರೇನು ?<br>**ಅಥವಾ**<br>ಕಣ್ಣಿನ ಹೊಂದಾಣಿಕೆಯ ಸಾಮರ್ಥ್ಯ ಎಂದರೇನು ? ಮಯೋಪಿಯ (ಸಮೀಪದೃಷ್ಟಿ) ಎಂದರೇನು ? ಈ ದೋಷಕ್ಕೆ ಕಾರಣಗಳನ್ನು ತಿಳಿಸಿ.<br>***ಉತ್ತರ :***<br>a) ★ ಕಾಮನಬಿಲ್ಲು ವಾತಾವರಣದಲ್ಲಿರುವ ಅತಿ ಸಣ್ಣ ನೀರಿನ ಹನಿಗಳಿಂದ ಉಂಟಾಗುವ ಸೂರ್ಯನ ಬೆಳಕಿನ ವರ್ಣವಿಭಜನೆಯಾಗಿದೆ. ½<br>★ ವಾತಾವರಣದಲ್ಲಿ ನೀರಿನ ಹನಿಗಳು ಕಿರುಪಟ್ಟಕಗಳಂತೆ ವರ್ತಿಸುತ್ತವೆ. ಅವು ಸೂರ್ಯನ ಬೆಳಕಿನ ಕಿರಣಗಳನ್ನು ವಕ್ರೀಭವನಗೊಳಿಸಿ ಚದುರಿಸುತ್ತವೆ. ನಂತರ ಆಂತರಿಕವಾಗಿ ಪ್ರತಿಫಲಿಸಿ ಅಂತಿಮವಾಗಿ ನೀರಿನ ಹನಿಗಳಿಂದ ಹೊರಬರುವಾಗ ವಕ್ರೀಭವನ ಹೊಂದುತ್ತವೆ. 1<br>★ ಬೆಳಕಿನ ವರ್ಣವಿಭಜನೆ ಮತ್ತು ಆಂತರಿಕ ಪ್ರತಿಫಲನದಿಂದಾಗಿ ವಿವಿಧ ಬಣ್ಣಗಳು ವೀಕ್ಷಕನ ಕಣ್ಣನ್ನು ತಲುಪುತ್ತವೆ. ½<br>b) ಕಲಿಲದ ಕಣಗಳಿಂದ ಬೆಳಕಿನ ಚದುರುವಿಕೆಯ ವಿದ್ಯಮಾನಕ್ಕೆ ಟಿಂಡಾಲ್ ಪರಿಣಾಮ ಎನ್ನುವರು. 1<br>**ಅಥವಾ**<br>★ ಕಣ್ಣಿನ ಮಸೂರದ ಸಂಗಮದೂರವನ್ನು ಹೊಂದಾಣಿಕೆ ಮಾಡಿಕೊಳ್ಳುವ ಕಣ್ಣಿನ ಸಾಮರ್ಥ್ಯವನ್ನು ಕಣ್ಣಿನ ಹೊಂದಾಣಿಕೆಯ ಸಾಮರ್ಥ್ಯ ಎನ್ನುವರು. 1 | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | | ಅಂಕಗಳು |
|---|---|---|---|
| | ★ ಸಮೀಪದ ವಸ್ತುಗಳನ್ನು ಸ್ಪಷ್ಟವಾಗಿ ನೋಡಬಲ್ಲ ಆದರೆ ದೂರದ ವಸ್ತುಗಳನ್ನು ಸ್ಪಷ್ಟವಾಗಿ ನೋಡಲಾರದ ಸಾಮರ್ಥ್ಯವೇ ಮಯೋಪಿಯಾ (ಸಮೀಪದೃಷ್ಟಿ) | 1 | |
| | *ಕಾರಣಗಳು :* | | |
| | i) ಕಣ್ಣಿನ ಮಸೂರದ ವಿಪರೀತ ವಕ್ರತೆ | ½ | |
| | ii) ಕಣ್ಣುಗುಡ್ಡೆಯು ಉದ್ದವಾಗಿರುವುದು | ½ | 3 |
| 10. | ದಿಕ್ಸೂಚಿಯನ್ನು ಉಪಯೋಗಿಸಿಕೊಂಡು ಒಂದು ದಂಡಕಾಂತದ ಸುತ್ತಲೂ ಕಾಂತೀಯ ಬಲರೇಖೆಗಳನ್ನು ಎಳೆಯುವ ಒಂದು ಚಟುವಟಿಕೆಯನ್ನು ವಿವರಿಸಿ. | | |
| | **ಅಥವಾ** | | |
| | 'ವಿದ್ಯುತ್‌ಪ್ರವಾಹವಿರುವ ವಾಹಕವನ್ನು ಕಾಂತಕ್ಷೇತ್ರದಲ್ಲಿ ಇರಿಸಿದಾಗ ಅದು ಬಲವನ್ನು ಅನುಭವಿಸುತ್ತದೆ' ಎಂದು ತೋರಿಸಲು ಒಂದು ಪ್ರಯೋಗವನ್ನು ವಿವರಿಸಿ. | | |
| | ***ಉತ್ತರ :*** | | |
| | ★ ಒಂದು ಚಿಕ್ಕ ದಿಕ್ಸೂಚಿ ಮತ್ತು ಒಂದು ದಂಡಕಾಂತವನ್ನು ತೆಗೆದುಕೊಳ್ಳಿ | ½ | |
| | ★ ಡ್ರಾಯಿಂಗ್ ಹಾಳೆಗೆ ಬಂಧಿಸಿದ ಬಿಳಿಯ ಹಾಳೆಯ ಮೇಲೆ ದಂಡಕಾಂತವನ್ನಿರಿಸಿ ದಂಡಕಾಂತದ ಸುತ್ತಲಿನ ಸೀಮಾರೇಖೆಯನ್ನು ಗುರುತು ಮಾಡಬೇಕು. | ½ | |
| | ★ ದಂಡಕಾಂತದ ಉತ್ತರ ಧ್ರುವದ ಬಳಿ ದಿಕ್ಸೂಚಿಯನ್ನು ಇರಿಸಿ ದಿಕ್ಸೂಚಿಯ ಎರಡೂ ತುದಿಗಳ ಸ್ಥಾನವನ್ನು ಗುರುತು ಮಾಡಬೇಕು. | ½ | |
| | ★ ದಿಕ್ಸೂಚಿಯ ಉತ್ತರ ಧ್ರುವವು ಮೊದಲು ಆಕ್ರಮಿಸಿದ ಸ್ಥಾನವನ್ನು ದಕ್ಷಿಣ ಧ್ರುವವು ಆಕ್ರಮಿಸುವಂತೆ ದಿಕ್ಸೂಚಿಯನ್ನು ಚಲಿಸಬೇಕು. | ½ | |
| | ★ ಇದೇ ರೀತಿ ದಿಕ್ಸೂಚಿಯನ್ನು ದಂಡಕಾಂತದ ದಕ್ಷಿಣ ಧ್ರುವ ತಲುಪುವವರೆಗೆ ಮುಂದುವರೆಸಬೇಕು. ಗುರುತು ಮಾಡಿದ ಬಿಂದುಗಳನ್ನು ನಯವಾದ ವಕ್ರರೇಖೆಯಿಂದ ಸೇರಿಸಬೇಕು. ಇದು ಕಾಂತೀಯ ಬಲರೇಖೆಗಳನ್ನು ಪ್ರತಿನಿಧಿಸುತ್ತದೆ. | 1 | 3 |
| | **ಅಥವಾ** | | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | | ಅಂಕಗಳು |
|---|---|---|---|
| | ★ ಅಲ್ಯುಮಿನಿಯಂನ ಒಂದು ಚಿಕ್ಕ ಸಲಾಕೆಯನ್ನು ಎರಡು ವಾಹಕತಂತಿಗಳ ಸಹಾಯದಿಂದ ನೇತುಹಾಕಿ. | ½ | |
| | ★ ಒಂದು ಶಕ್ತಿಯುತ ಲಾಳ ಕಾಂತವನ್ನು ತೆಗೆದುಕೊಂಡು ಅದರ ಕಾಂತಕ್ಷೇತ್ರವು ಮೇಲ್ಮುಖವಾಗರುವಂತೆ, ಆ ಎರಡು ಧ್ರುವಗಳ ನಡುವೆ ಚಿಕ್ಕ ಸಲಾಕೆ ಇರುವಂತೆ ಇರಿಸಬೇಕು. | ½ | |
| | ★ ಅಲ್ಯೂಮಿನಿಯಂ ಸಲಾಕೆಯನ್ನು ಬ್ಯಾಟರಿ, ಸ್ವಿಚ್ ಮತ್ತು ರಿಯೋಸ್ಟಾಟ್‌ಗಳಿಗೆ ಸರಣಿ ಜೋಡಣೆಯಲ್ಲಿ ಸಂಪರ್ಕಿಸಬೇಕು. | ½ | |
| | ★ ಈಗ, ಒಂದು ನಿರ್ದಿಷ್ಟ ದಿಕ್ಕಿನಲ್ಲಿ ಅಲ್ಯೂಮಿನಿಯಂ ಸಲಾಕೆಯ ಮೂಲಕ ವಿದ್ಯುತ್ ಹರಿಸಬೇಕು. | ½ | |
| | ★ ಆಗ ಸಲಾಕೆಯು ಒಂದು ದಿಕ್ಕಿನಲ್ಲಿ ಸ್ಥಾನಪಲ್ಲಟಗೊಳ್ಳುತ್ತದೆ. | ½ | |
| | ★ ಸಲಾಕೆಯಲ್ಲಿನ ವಿದ್ಯುತ್‌ಪ್ರವಾಹದ ದಿಕ್ಕನ್ನು ಬದಲಾಯಿಸಿದಾಗ ಅದು ವಿರುದ್ಧ ದಿಕ್ಕಿನಲ್ಲಿ ಸ್ಥಾನಪಲ್ಲಟಗೊಳ್ಳುತ್ತದೆ. | ½ | 3 |
| **V.** | **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** | **2 × 4 = 8** | |
| 11. | a) ಸಂಗಮದೂರ 30 cm ಇರುವ ಒಂದು ನಿಮ್ನ ಮಸೂರದಿಂದ 20 cm ದೂರದಲ್ಲಿ ಪ್ರತಿಬಿಂಬವು ಉಂಟಾಗುವುದು. ಹಾಗಾದರೆ ವಸ್ತುದೂರವನ್ನು ಕಂಡುಹಿಡಿಯಿರಿ. | | |
| | b) ಒಂದು 4 cm ಎತ್ತರದ ವಸ್ತುವನ್ನು ಪೀನ ಮಸೂರದ ಪ್ರಧಾನ ಅಕ್ಷದ ಮೇಲೆ ಲಂಬವಾಗಿ ಇರಿಸಿದೆ. ಪ್ರತಿಬಿಂಬ ದೂರ ಮತ್ತು ವಸ್ತುವಿನ ದೂರವು ಕ್ರಮವಾಗಿ 60 cm ಮತ್ತು 30 cm ಆದರೆ, ಪ್ರತಿಬಿಂಬದ ಎತ್ತರ ಮತ್ತು ವರ್ಧನೆಯನ್ನು ಕಂಡುಹಿಡಿಯಿರಿ. | | |
| | ***ಉತ್ತರ :*** | | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | a) ಪ್ರತಿಬಿಂಬ ದೂರ $v = -20$ cm | |
| | ಸಂಗಮ ದೂರ $f = -30$ cm | |
| | ವಸ್ತುವಿನ ದೂರ $u = ?$ | |
| | $\frac{1}{v} - \frac{1}{u} = \frac{1}{f}$ | ½ |
| | $\frac{1}{u} = \frac{1}{f} - \frac{1}{v}$ | |
| | $= \frac{1}{-30} - \frac{1}{(-20)}$ | ½ |
| | $= \frac{-1}{30} + \frac{1}{20}$ | |
| | $= \frac{-3+2}{60}$ | |
| | $\frac{1}{u} = \frac{-1}{60}$ | ½ |
| | ಅಥವಾ $u = -60$ m | |
| | ಆದ್ದರಿಂದ ವಸ್ತುವಿನ ದೂರ 60 cm. | ½ |
| | b) ವಸ್ತುವಿನ ಎತ್ತರ $h = 4$ cm | |
| | ಪ್ರತಿಬಿಂಬ ದೂರ $v = 60$ cm | |
| | ವಸ್ತುವಿನ ದೂರ $u = -30$ cm | |
| | ಪ್ರತಿಬಿಂಬದ ಎತ್ತರ $h' = ?$ | |
| | ವರ್ಧನೆ $m = ?$ | |
| | $m = \frac{h'}{h} = \frac{v}{u}$ | ½ |
| | ಪ್ರತಿಬಿಂಬದ ಎತ್ತರ $h' = h\left(\frac{v}{u}\right)$ | |
| | $h' = 4\left(\frac{+60}{-30}\right)$ | |
| | $h' = -8$ cm | ½ |
| | ಆದ್ದರಿಂದ ಪ್ರತಿಬಿಂಬದ ಎತ್ತರ 8 cm | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ವರ್ಧನೆ $m = \frac{v}{u}$ ½<br>$= \frac{60 \text{ cm}}{-30 \text{ cm}}$<br>$m = -2$ ½<br>ಆದ್ದರಿಂದ ವರ್ಧನೆಯು – 2. | 4 |
| 12. | a) ಜೌಲನ ಉಷ್ಣೋತ್ಪಾದನಾ ನಿಯಮವನ್ನು ನಿರೂಪಿಸಿ ಮತ್ತು ವಿದ್ಯುತ್‌ನ ಉಷ್ಣೋತ್ಪಾದನಾ ಪರಿಣಾಮದ ಮೇಲೆ ಕಾರ್ಯನಿರ್ವಹಿಸುವ ಯಾವುದಾದರೂ ಒಂದು ಸಾಧನವನ್ನು ಹೆಸರಿಸಿ.<br>b) ಕಾರಣ ಕೊಡಿ :<br>i) ವಿದ್ಯುತ್ ದೀಪಗಳ ತಂತುಗಳಲ್ಲಿ ಟಂಗ್‌ಸ್ಟನ್ ಅನ್ನು ಬಳಸಲಾಗುತ್ತದೆ.<br>ii) ವಿದ್ಯುತ್ ಪ್ರಸರಣದಲ್ಲಿ ಸಾಮಾನ್ಯವಾಗಿ ತಾಮ್ರ ಮತ್ತು ಅಲ್ಯೂಮಿನಿಯಂ ತಂತಿಯನ್ನು ಬಳಸಲಾಗುತ್ತದೆ.<br>**ಅಥವಾ**<br>a) ಓಮ್‌ನ ನಿಯಮವನ್ನು ನಿರೂಪಿಸಿ. ವಾಹಕದ ರೋಧವು ಅವಲಂಬಿಸಿರುವ ಅಂಶಗಳನ್ನು ಪಟ್ಟಿ ಮಾಡಿ.<br>b) ವಿದ್ಯುತ್‌ಪ್ರವಾಹವಿರುವ ವಾಹಕದ "ಎರಡು ಬಿಂದುಗಳ ನಡುವಿನ ವಿಭವಾಂತರ 1 $V$" ಈ ಹೇಳಿಕೆಯ ಅರ್ಥವನ್ನು ಬರೆಯಿರಿ.<br>***ಉತ್ತರ :***<br>a) ಜೌಲನ ನಿಯಮದ ಪ್ರಕಾರ ರೋಧಕದಲ್ಲಿ ಉತ್ಪತ್ತಿಯಾದ ಉಷ್ಣವು<br>i) ಕೊಟ್ಟಿರುವ ರೋಧದಲ್ಲಿ ಪ್ರವಹಿಸುತ್ತಿರುವ ವಿದ್ಯುತ್‌ಪ್ರವಾಹದ ವರ್ಗಕ್ಕೆ ನೇರ ಅನುಪಾತದಲ್ಲಿರುತ್ತದೆ.<br>ii) ಕೊಟ್ಟಿರುವ ವಿದ್ಯುತ್‌ಪ್ರವಾಹಕ್ಕೆ ರೋಧವು ನೇರ ಅನುಪಾತದಲ್ಲಿರುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | iii) ರೋಧಕಗಳ ಮೂಲಕ ಹರಿಯುವ ವಿದ್ಯುತ್‌ಪ್ರವಾಹದ ಕಾಲಕ್ಕೆ ನೇರ ಅನುಪಾತದಲ್ಲಿರುತ್ತದೆ. | |
| | (ಸೂಚನೆ : $H = I^2 RT$ ಸೂತ್ರವನ್ನು ಬರೆದರೆ 1 ಅಂಕವನ್ನು ನೀಡುವುದು) | |
| | ವಿದ್ಯುತ್ ಉಷ್ಣೋತ್ಪಾದನಾ ಪರಿಣಾಮದ ಮೇಲೆ ಕಾರ್ಯನಿರ್ವಹಿಸುವ ಸಾಧನಗಳು | |
| | ★ ವಿದ್ಯುತ್ ಫ್ಯಾನ್ | |
| | ★ ವಿದ್ಯುತ್ ಹೀಟರ್ | |
| | ★ ವಿದ್ಯುತ್ ಇಸ್ತ್ರಿಪೆಟ್ಟಿಗೆ | |
| | ★ ವಿದ್ಯುತ್ ಬಲ್ಬ್ | |
| | ★ ವಿದ್ಯುತ್ ಕೆಟಲ್ | |
| | ★ ವಿದ್ಯುತ್ ಒಲೆ (ಯಾವುದಾದರೂ ಒಂದು) 4 × ½ | |
| | b) i) ಹೆಚ್ಚಿನ ರೋಧಶೀಲತೆ ಮತ್ತು ಹೆಚ್ಚಿನ ದ್ರವನ ಬಿಂದು ಹೊಂದಿದ್ದು ಮತ್ತು ಹೆಚ್ಚಿನ ತಾಪಮಾನದಲ್ಲಿ ಕರಗುವುದಿಲ್ಲವಾದ್ದರಿಂದ ವಿದ್ಯುತ್‌ದೀಪಗಳ ತಂತುಗಳಲ್ಲಿ ಬಹುತೇಕ ಟಂಗ್‌ಸ್ಟನ್ ಅನ್ನು ಬಳಸಲಾಗುತ್ತದೆ. 1 | |
| | ii) ತಾಮ್ರ ಮತ್ತು ಅಲ್ಯೂಮಿನಿಯಂ ತಂತಿಗಳು ಸೂಕ್ತ ದ್ರವನ ಬಿಂದು ಹೊಂದಿರುವ ಲೋಹ ಅಥವಾ ಮಿಶ್ರಲೋಹದ ತಂತಿಗಳಾಗಿದ್ದು ಕಡಿಮೆ ರೋಧ ಹೊಂದಿದ್ದು ವಿದ್ಯುತ್ ಪ್ರಸರಣದಲ್ಲಿ ಸಹಕಾರಿಯಾಗಿವೆ. 1 | 4 |
| | **ಅಥವಾ** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | | ಅಂಕಗಳು |
|---|---|---|---|
| | a) ಓಮ್‌ನ ನಿಯಮ : ಸ್ಥಿರವಾದ ತಾಪಮಾನದಲ್ಲಿ ವಿದ್ಯುತ್‌ಮಂಡಲದಲ್ಲಿನ ಲೋಹದ ತಂತಿಯ (ರೋಧಕ) ನಡುವಿನ ವಿಭವಾಂತರವು ಅದರ ಮೂಲಕ ಹರಿಯುವ ವಿದ್ಯುತ್‌ಪ್ರವಾಹಕ್ಕೆ ನೇರ ಅನುಪಾತದಲ್ಲಿರುತ್ತದೆ. | 1 | |
| | ವಾಹಕದ ರೋಧವು ಕೆಳಗಿನ ಅಂಶಗಳ ಮೇಲೆ ಅವಲಂಬಿಸಿದೆ : | | |
| | ★ ವಾಹಕದ ಉದ್ದ | ½ | |
| | ★ ವಾಹಕದ ಅಡ್ಡಕೊಯ್ತ | ½ | |
| | ★ ವಾಹಕದ ಪ್ರಾಕೃತಿಕ ಗುಣ | ½ | |
| | ★ ವಾಹಕದ ತಾಪಮಾನ | ½ | |
| | b) ಯಾವುದೇ ಅನುಕ್ರಮ ವಿದ್ಯುತ್‌ವಾಹಕದ ಎರಡು ಬಿಂದುಗಳ ನಡುವೆ 1 ಕೂಲಾಮ್ ( 1C ) ಆವೇಶವನ್ನು ಒಂದು ಬಿಂದುವಿನಿಂದ ಇನ್ನೊಂದು ಬಿಂದುವಿಗೆ ತರುವಲ್ಲಿ 1 ಜೌಲ್ ( 1J ) ಕೆಲಸ ನಡೆದರೆ ಆ ಎರಡು ಬಿಂದುಗಳ ನಡುವಿನ ವಿಭವಾಂತರ 1 ವೋಲ್ಟ್ ( 1V ) ಆಗಿರುತ್ತದೆ. | 1 | 4 |

**A**

**CCE RF/RR/PF/PR**

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,

**ಮಲ್ಲೇಶ್ವರಂ, ಬೆಂಗಳೂರು – 560 003**

# KARNATAKA SCHOOL EXAMINATION AND ASSESSMENT BOARD,

**MALLESHWARAM, BENGALURU – 560 003**

**ಮೇ 2026 ರ ಪರೀಕ್ಷೆ - 2**

**MAY 2026 EXAMINATION - 2**

## ಮಾದರಿ ಉತ್ತರಗಳು

## MODEL ANSWERS

**ಸಂಕೇತ ಸಂಖ್ಯೆ : 83-K** **CODE NO. : 83-K**

## ವಿಷಯ : ವಿಜ್ಞಾನ

## Subject : SCIENCE

**(ಭೌತ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಜೀವ ವಿಜ್ಞಾನ / Physics, Chemistry & Biology)**

**(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)**

**(Regular Fresh / Regular Repeater / Private Fresh / Private Repeater)**

**(ಕನ್ನಡ ಮಾಧ್ಯಮ / Kannada Medium)**

**(ರಸಾಯನ ವಿಜ್ಞಾನ / Chemistry)**

**ದಿನಾಂಕ : 19. 05. 2026 ]** **[ ಗರಿಷ್ಠ ಅಂಕಗಳು : 80**

**Date : 19. 05. 2026 ]** **[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | **ಭಾಗ – B** <br> **( ರಸಾಯನ ವಿಜ್ಞಾನ )** | |
| **VI.** | **ಬಹು-ಆಯ್ಕೆ ಪ್ರಶ್ನೆಗಳು : $3 \times 1 = 3$** | |
| 13. | ಕೆಳಗಿನವುಗಳಲ್ಲಿ ರಾಸಾಯನಿಕ ಬದಲಾವಣೆಗೆ ಒಂದು ಉದಾಹರಣೆ <br> (A) ನೀರಿನಲ್ಲಿ ಉಪ್ಪು ಕರಗುವುದು <br> (B) ಕಾಗದವನ್ನು ತುಂಡರಿಸುವುದು <br> (C) ಕಬ್ಬಿಣವು ತುಕ್ಕು ಹಿಡಿಯುವುದು <br> (D) ನೀರು ಕುದಿಯುವುದು <br> *ಉತ್ತರ :* (C) ಕಬ್ಬಿಣವು ತುಕ್ಕು ಹಿಡಿಯುವುದು | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 14. | ಸಾರರಿಕ್ತ ಆಮ್ಲಗಳೊಂದಿಗೆ ಲೋಹಗಳು ವರ್ತಿಸಿದಾಗ ಬಿಡುಗಡೆಯಾಗುವ ಅನಿಲ<br>(A) $H_2$ (B) $CO_2$<br>(C) $SO_2$ (D) $NO_2$<br>**ಉತ್ತರ :** (A) $H_2$ | 1 |
| 15. | ಒಂದು ಅನುರೂಪ ಶ್ರೇಣಿಯಲ್ಲಿ ಎರಡು ಅನುಕ್ರಮ ಸಂಯುಕ್ತಗಳ ಅಣುಸೂತ್ರಗಳಲ್ಲಿ ಕಂಡುಬರುವ ವ್ಯತ್ಯಾಸ<br>(A) $C_2H_4$ (B) $CH_4$<br>(C) $C_2H_2$ (D) $CH_2$<br>**ಉತ್ತರ :** (D) $CH_2$ | 1 |
| **VII.** | **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ :** **3 × 1 = 3** | |
| 16. | *P, Q, R* ಮತ್ತು *S* ಗಳೆಂಬ ನಾಲ್ಕು ದ್ರಾವಣಗಳ pH ಮೌಲ್ಯಗಳು ಅನುಕ್ರಮವಾಗಿ 10, 13·7, 7 ಮತ್ತು 1·2 ಆಗಿವೆ. ಇವುಗಳಲ್ಲಿ ಯಾವ ದ್ರಾವಣವನ್ನು ಆಮ್ಲಶಾಮಕದ ತಯಾರಿಕೆಗೆ ಬಳಸಬಹುದು ? ಏಕೆ ?<br>**ಉತ್ತರ :**<br>★ '*P*'<br>★ '*P*' ಯು ಸೌಮ್ಯ ಪ್ರತ್ಯಾಮ್ಲವಾಗಿದೆ. 2 × ½ | 1 |
| 17. | "ಅಲ್ಯುಮಿನಿಯಂ ಮೇಲಿನ ವಸ್ತುಗಳು ಕಬ್ಬಿಣದ ವಸ್ತುಗಳ ರೀತಿಯಲ್ಲಿ ಸುಲಭವಾಗಿ ಸಂಕ್ಷಾರಣಗೊಳ್ಳುವುದಿಲ್ಲ." ಈ ಹೇಳಿಕೆಯನ್ನು ಸಮರ್ಥಿಸಿ.<br>**ಉತ್ತರ :**<br>ಅಲ್ಯುಮಿನಿಯಂ ಮೇಲಿನ ರಕ್ಷಣಾತ್ಮಕ ಆಕ್ಸೈಡ್ ಪದರವು ಅಲ್ಯುಮಿನಿಯಂ ವಸ್ತುಗಳ ಮತ್ತಷ್ಟು ಉತ್ಕರ್ಷಣೆಗೊಳ್ಳುವುದನ್ನು ತಡೆಯುತ್ತದೆ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 18. | *X* ಸಂಯುಕ್ತವು ಸಾರಯುಕ್ತ ಸಲ್ಫ್ಯೂರಿಕ್ ಆಮ್ಲದೊಂದಿಗೆ ವರ್ತಿಸಿ *Y* ಮತ್ತು *Z* ಸಂಯುಕ್ತಗಳನ್ನು ಉತ್ಪತ್ತಿ ಮಾಡುತ್ತದೆ. *Y*ಯು ಆಲ್ಕೀನ್‌ಗಳ ಮೊದಲ ಸದಸ್ಯನಾಗಿದ್ದರೆ, *X* ಸಂಯುಕ್ತವನ್ನು ಗುರುತಿಸಿ. | |
| | ***ಉತ್ತರ :*** | |
| | '*X*' ಸಂಯುಕ್ತವು ಎಥನಾಲ್ ಆಗಿದ್ದು, ಸಾರೀಕೃತ $H_2SO_4$ ದೊಂದಿಗೆ ನಿರ್ಜಲೀಕರಣಗೊಂಡು ಈಥೀನ್ ಅನ್ನು ಉಂಟು ಮಾಡುತ್ತದೆ. | |
| | ಅಥವಾ | |
| | $\underset{(X)}{C_2H_5OH} \xrightarrow[\Delta]{\text{Conc. } H_2SO_4} \underset{(Y)}{H_2C=CH_2} + \underset{(Z)}{H_2O}$ | |
| | (ಯಾವುದಾದರೂ ಒಂದು) | 1 |
| **VIII.** | **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 3 × 2 = 6** | |
| 19. | ಆಮ್ಲ ಮಳೆನೀರು ವಿದ್ಯುತ್‌ಪ್ರವಾಹವನ್ನು ಹರಿಯಲು ಬಿಡುತ್ತದೆ, ಆದರೆ ಆಸವಿತ ನೀರು ವಿದ್ಯುತ್‌ಪ್ರವಾಹವನ್ನು ಹರಿಯಲು ಬಿಡುವುದಿಲ್ಲ. ಏಕೆ ? | |
| | ***ಉತ್ತರ :*** | |
| | ★ ಮಳೆನೀರು ಕರಗಿರುವ ಲವಣಗಳನ್ನು ಹೊಂದಿದ್ದು, ಅವು ಅಯಾನುಗಳಾಗಿ ವಿಯೋಜನೆಗೊಳ್ಳುತ್ತವೆ. ಈ ಅಯಾನುಗಳು ವಿದ್ಯುತ್‌ಪ್ರವಾಹವನ್ನು ಹರಿಸುತ್ತವೆ. 1 | |
| | ★ ಆಸವಿತ ನೀರಿನಲ್ಲಿ ವಿದ್ಯುತ್‌ಪ್ರವಾಹವನ್ನು ಹರಿಸಲು ಅಯಾನುಗಳಿರುವುದಿಲ್ಲ. 1 | 2 |
| 20. | ಕಾಸುವಿಕೆ ಮತ್ತು ಹುರಿಯುವಿಕೆಗಳ ನಡುವಣ ವ್ಯತ್ಯಾಸಗಳನ್ನು ಬರೆಯಿರಿ. | |
| | **ಅಥವಾ** | |
| | ಸೋಡಿಯಂ ಮತ್ತು ಕ್ಲೋರಿನ್ ಪರಮಾಣುಗಳ ನಡುವೆ ಅಯಾನಿಕ ಬಂಧ ಉಂಟಾಗುವುದನ್ನು ವಿವರಿಸಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

**ಉತ್ತರ :**

| **ಕಾಸುವಿಕೆ** | **ಹುರಿಯುವಿಕೆ** |
|---|---|
| ★ ಲೋಹದ ಆಕ್ಸೈಡ್ ಆಗಿ ಪರಿವರ್ತಿಸಲು, ಲೋಹದ ಕಾರ್ಬೋನೇಟ್ ಅದುರನ್ನು ಕಡಿಮೆ ಗಾಳಿಯಲ್ಲಿ ಹೆಚ್ಚಿನ ಉಷ್ಣತೆಯಲ್ಲಿ ಕಾಸುವುದು. | ★ ಲೋಹದ ಆಕ್ಸೈಡ್ ಆಗಿ ಪರಿವರ್ತಿಸಲು, ಲೋಹದ ಸಲ್ಫೈಡ್ ಅದುರನ್ನು ಅಧಿಕ ಪ್ರಮಾಣದ ಗಾಳಿಯಲ್ಲಿ ಹೆಚ್ಚಿನ ಉಷ್ಣತೆಯಲ್ಲಿ ಕಾಸುವುದು. |
| ★ $ZnCO_3 \rightarrow ZnO + CO_2$ | ★ $ZnS + O_2 \rightarrow ZnO + SO_2$ |

1 + 1 — 2

**ಅಥವಾ**

★ ಸೋಡಿಯಂ ಒಂದು ವೇಲೆನ್ಸ್ ಎಲೆಕ್ಟ್ರಾನ್ ಕಳೆದುಕೊಂಡು $Na^+$ ಆಗುತ್ತದೆ. ½

★ ಕ್ಲೋರಿನ್ ಒಂದು ಎಲೆಕ್ಟ್ರಾನ್ ಅನ್ನು ಸೋಡಿಯಂ ಪಡೆದುಕೊಂಡು $Cl^-$ ಆಗುತ್ತದೆ. ½

★ ಸೋಡಿಯಂ ಮತ್ತು ಕ್ಲೋರೈಡ್ ಅಯಾನುಗಳು ವಿರುದ್ಧ ವಿದ್ಯುದಂಶ ಹೊಂದಿದ್ದು, ಪರಸ್ಪರ ಆಕರ್ಷಿಸಲ್ಪಟ್ಟು, ಪ್ರಬಲ ಸ್ಥಾಯೀ ವಿದ್ಯುತ್ ಆಕರ್ಷಣ ಬಲದಿಂದ NaCl ಆಗುತ್ತದೆ. 1

$$Na \longrightarrow Na^+ + e^-$$

$$Cl + e^- \longrightarrow Cl^-$$




2

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 21. | ಕೆಳಗಿನ ಕಾರ್ಬನ್ ಸಂಯುಕ್ತಗಳ ಅಣುಸೂತ್ರ ಮತ್ತು ರಚನೆಗಳನ್ನು ಬರೆಯಿರಿ :<br>i) ಸೈಕ್ಲೋಪೆಂಟೇನ್<br>ii) ಪ್ರೋಪೇನಾಲ್<br>*ಉತ್ತರ :* | |
| | i) ಸೈಕ್ಲೋಪೆಂಟೇನ್ $C_5H_{10}$ ½ | |
| |  ½ | |
| | ii) ಪ್ರೋಪೇನಾಲ್ $C_3H_7OH$ ½ | |
| |  ½ | 2 |
| **IX.** | **ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : $3 \times 3 = 9$** | |
| 22. | ಲೋಹದ ಮೇಲೆ ಹಬೆಯ ವರ್ತನೆಯನ್ನು ತೋರಿಸಲು ಬಳಸುವ ಉಪಕರಣಗಳ ಜೋಡಣೆಯ ಚಿತ್ರವನ್ನು ಬರೆಯಿರಿ. ಕೆಳಗಿನ ಭಾಗಗಳನ್ನು ಗುರುತಿಸಿ :<br>i) ನೀರಿನಲ್ಲಿ ಅದ್ದಿದ ಗಾಜಿನ ನೂಲು<br>ii) ನಿರ್ಗಮ ನಾಳ<br>*ಉತ್ತರ :* | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|




ಚಿತ್ರಕ್ಕೆ — 2

ಭಾಗಗಳಿಗೆ — ½ + ½ 3

23. ಕೆಳಗಿನ ಸಂಯುಕ್ತಗಳ ಅಣುಸೂತ್ರವನ್ನು ಬರೆದು, ಪ್ರತಿಯೊಂದರ ಎರಡು ಉಪಯೋಗಗಳನ್ನು ಬರೆಯಿರಿ :

i) ಅಡುಗೆ ಸೋಡಾ

ii) ಪ್ಲಾಸ್ಟರ್ ಆಫ್ ಪ್ಯಾರಿಸ್

**ಅಥವಾ**

ಕ್ಲೋರ್ ಆಲ್ಕಲಿ ಪ್ರಕ್ರಿಯೆಯ ಉತ್ಪನ್ನಗಳನ್ನು ಹೆಸರಿಸಿ. ಪ್ರತಿಯೊಂದರ ಒಂದೊಂದು ಉಪಯೋಗವನ್ನು ಬರೆಯಿರಿ.

***ಉತ್ತರ :***

i) ಬೇಕಿಂಗ್ ಸೋಡಾ (ಅಡುಗೆ ಸೋಡಾ) : $NaHCO_3$. ½

*ಉಪಯೋಗಗಳು :*

★ ಬೇಕಿಂಗ್ ಪುಡಿಯ ತಯಾರಿಕೆಯಲ್ಲಿ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ★ ಜಠರದಲ್ಲಿ ಹೆಚ್ಚುವರಿ ಆಮ್ಲವನ್ನು ತಟಸ್ಥಗೊಳಿಸಲು ಆಮ್ಲಶಾಮಕವಾಗಿ | |
| | ★ ಬೆಂಕಿ ಆರಿಸುವ ಸೋಡಾ-ಆ್ಯಸಿಡ್ ಉಪಕರಣಗಳಲ್ಲಿ. | |
| | (ಯಾವುದಾದರೂ ಎರಡು) ½ + ½ | |
| | ii) ಪ್ಲಾಸ್ಟರ್ ಆಫ್ ಪ್ಯಾರಿಸ್ — $CaSO_4 . \frac{1}{2} H_2O$ ½ | |
| | *ಉಪಯೋಗಗಳು :* | |
| | ★ ಮುರಿದ ಮೂಳೆಗಳಿಗೆ ಆಧಾರವಾಗಿ ಲೇಪನ ಮಾಡಲು ವೈದ್ಯರು ಬಳಸುತ್ತಾರೆ. | |
| | ★ ಆಟಿಕೆಗಳ ತಯಾರಿಕೆಗೆ | |
| | ★ ಅಲಂಕಾರಿಕ ವಸ್ತುಗಳ ತಯಾರಿಕೆಗೆ | |
| | ★ ನುಣುಪಾದ ಮೇಲ್ಮೈ ನಿರ್ಮಿಸಲು | |
| | (ಯಾವುದಾದರೂ ಎರಡು) ½ + ½ | 4 |
| | **ಅಥವಾ** | |
| | ಕ್ಲೋರ್-ಆಲ್ಕಲಿ ಪ್ರಕ್ರಿಯೆಯ ಉತ್ಪನ್ನಗಳು | |
| | i) NaOH — (ಸೋಡಿಯಂ ಹೈಡ್ರಾಕ್ಸೈಡ್) ½ | |
| | ii) $Cl_2$ (ಕ್ಲೋರಿನ್) ಅನಿಲ ½ | |
| | iii) $H_2$ (ಹೈಡ್ರೋಜನ್) ಅನಿಲ ½ | |
| | NaOH ನ ಉಪಯೋಗಗಳು : | |
| | ★ ಲೋಹಗಳ ಜಿಡ್ಡು ನಿವಾರಣೆಗೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ★ ಸಾಬೂನು ಮತ್ತು ಮಾರ್ಜಕಗಳ ತಯಾರಿಕೆಗೆ<br>★ ಕಾಗದದ ತಯಾರಿಕೆಗೆ<br>★ ಕೃತಕ ನೂಲುಗಳ ತಯಾರಿಕೆಗೆ (ಯಾವುದಾದರೂ ಒಂದು) ½<br>$Cl_2$ ನ ಉಪಯೋಗಗಳು :<br>★ ನೀರಿನ ಶುದ್ಧೀಕರಣಕ್ಕೆ<br>★ ಈಜು ಕೊಳಗಳಲ್ಲಿ<br>★ PVC ತಯಾರಿಕೆಯಲ್ಲಿ<br>★ CFC ತಯಾರಿಕೆಯಲ್ಲಿ<br>★ ಕೀಟನಾಶಕಗಳ ತಯಾರಿಕೆಯಲ್ಲಿ<br>★ ಸೋಂಕು ನಿವಾರಕವಾಗಿ<br>(ಯಾವುದಾದರೂ ಒಂದು) ½<br>$H_2$ ನ ಉಪಯೋಗಗಳು :<br>★ ಇಂಧನವಾಗಿ<br>★ ಕೃತಕ ಬೆಣ್ಣೆ ತಯಾರಿಕೆಗೆ<br>★ ರಸಗೊಬ್ಬರಗಳಿಗಾಗಿ ಅಮೋನಿಯಾ ತಯಾರಿಕೆಯಲ್ಲಿ<br>(ಯಾವುದಾದರೂ ಒಂದು) ½ | 3 |
| 24. | ಕೆಳಗಿನ ರಾಸಾಯನಿಕ ಸಮೀಕರಣಗಳನ್ನು ಸರಿದೂಗಿಸಿ :<br>i) $N_2 + H_2 \rightarrow NH_3$ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ii) $H_2O \rightarrow H_2 + O_2$ | |
| | iii) $MnO_2 + HCl \rightarrow MnCl_2 + H_2O + Cl_2$ | |
| | **ಉತ್ತರ :** | |
| | i) $N_2 + 3H_2 \rightarrow 2NH_3$ 1 | |
| | ii) $2H_2O \rightarrow 2H_2 + O_2$ 1 | |
| | iii) $MnO_2 + 4HCl \rightarrow MnCl_2 + 2H_2O + Cl_2$ 1 | 3 |
| **X.** | **ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ : 1 × 4 = 4** | |
| 25. | a) ಕಾರ್ಬನ್ ಪರಮಾಣುಗಳು $C^{4-}$ ಆ್ಯನಯಾನ್ ಅಥವಾ $C^{4+}$ ಕ್ಯಾಟಯಾನ್‌ಗಳನ್ನು ಉಂಟು ಮಾಡುವುದಿಲ್ಲ. ಏಕೆ ? | |
| | b) ಪರ್ಯಾಪ್ತ ಮತ್ತು ಅಪರ್ಯಾಪ್ತ ಹೈಡ್ರೋಕಾರ್ಬನ್‌ಗಳ ನಡುವಣ ಯಾವುದಾದರೂ ಎರಡು ವ್ಯತ್ಯಾಸಗಳನ್ನು ಬರೆಯಿರಿ. | |
| | **ಅಥವಾ** | |
| | a) ಸಾಬೂನು ಸ್ವಚ್ಛಗೊಳಿಸುವ ಪ್ರಕ್ರಿಯೆಯನ್ನು ವಿವರಿಸಿ. | |
| | b) ನೀರಿನ ಗಡಸುತನಕ್ಕೆ ಕಾರಣವಾದ ಲವಣಗಳು ಯಾವುವು ? ಮಾರ್ಜಕಗಳು ಗಡಸು ನೀರಿನಲ್ಲಿಯೂ ಪರಿಣಾಮಕಾರಿಯಾಗಿವೆ. ಏಕೆ ? | |
| | **ಉತ್ತರ :** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | a) ★ ಕಾರ್ಬನ್ ಪರಮಾಣು ನಾಲ್ಕು ಇಲೆಕ್ಟ್ರಾನ್‌ಗಳನ್ನು ಪಡೆದುಕೊಂಡು $C^{4-}$ ಆ್ಯನಯಾನ್ ಉಂಟಾಗಬಹುದು. ಆದರೆ, ಆರು ಪ್ರೋಟಾನ್‌ಗಳಿರುವ ಬೀಜಕೇಂದ್ರವು ಹತ್ತು ಇಲೆಕ್ಟ್ರಾನ್‌ಗಳನ್ನು ಹಿಡಿದಿಟ್ಟುಕೊಳ್ಳುವುದು ಕಷ್ಟ. 1 | |
| | ★ ಕಾರ್ಬನ್ ಪರಮಾಣು ನಾಲ್ಕು ಇಲೆಕ್ಟ್ರಾನ್‌ಗಳನ್ನು ಕಳೆದುಕೊಂಡು $C^{4+}$ ಕ್ಯಾಟಯಾನ್‌ನನ್ನು ಉಂಟು ಮಾಡಬಹುದು. ಆದರೆ, ಕಾರ್ಬನ್‌ನಿಂದ ನಾಲ್ಕು ಇಲೆಕ್ಟ್ರಾನ್‌ಗಳನ್ನು ಹೊರತೆಗೆಯಲು ಹೆಚ್ಚಿನ ಪ್ರಮಾಣದ ಶಕ್ತಿಯ ಅವಶ್ಯಕತೆಯಿದೆ. 1 | |
| | b) | |

| ಪರ್ಯಾಪ್ತ ಹೈಡ್ರೋಕಾರ್ಬನ್ | ಅಪರ್ಯಾಪ್ತ ಹೈಡ್ರೋಕಾರ್ಬನ್ |
|---|---|
| ★ ಕಾರ್ಬನ್-ಕಾರ್ಬನ್ ಪರಮಾಣುಗಳ ನಡುವೆ ಏಕಬಂಧವನ್ನು ಹೊಂದಿವೆ | ★ ಕಾರ್ಬನ್-ಕಾರ್ಬನ್ ಪರಮಾಣುಗಳ ನಡುವೆ ದ್ವಿಬಂಧವನ್ನು ಅಥವಾ ತ್ರಿಬಂಧಗಳನ್ನು ಹೊಂದಿವೆ |
| ★ ಕಡಿಮೆ ಕ್ರಿಯಾಶೀಲ | ★ ಹೆಚ್ಚು ಕ್ರಿಯಾಶೀಲ |
| ★ ಆದೇಶನ ಕ್ರಿಯೆಗಳಿಗೆ ಒಳಪಡುತ್ತವೆ | ★ ಆದೇಶನ ಮತ್ತು ಸಂಕಲನ ಕ್ರಿಯೆಗೆ ಒಳಪಡುತ್ತವೆ |
| ★ ದಹಿಸಿದಾಗ ನೀಲಿ ಜ್ವಾಲೆಯೊಂದಿಗೆ ಉರಿಯುತ್ತವೆ | ★ ದಹಿಸಿದಾಗ ಕೆಂಪು / ಹಳದಿ ಜ್ವಾಲೆಯೊಂದಿಗೆ ಉರಿಯುತ್ತವೆ. |

(ಯಾವುದಾದರೂ ಎರಡು) 1 + 1    4

**ಅಥವಾ**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | | ಅಂಕಗಳು |
|---|---|---|---|
| | a) ★ ಸಾಬೂನಿನ ಅಯಾನಿಕ್ ತುದಿ ನೀರಿನೊಂದಿಗೆ ವರ್ತಿಸಿದರೆ ಕಾರ್ಬನ್ ಸರಪಳಿಯು ಜಿಡ್ಡು ಅಥವಾ ಕೊಳೆಯೊಂದಿಗೆ ವರ್ತಿಸುತ್ತದೆ. | ½ | |
| | ★ ಸಾಬೂನಿನ ಅಣುಗಳು ಮಿಸೆಲ್‌ಗಳೆಂಬ ರಚನೆಯನ್ನು ಉಂಟುಮಾಡುತ್ತವೆ. ಇಲ್ಲಿ ಹೈಡ್ರೋಕಾರ್ಬನ್ ತುದಿಯು ಎಣ್ಣೆಯ ಕಡೆಗಿದ್ದರೆ, ಅಯಾನಿಕ ತುದಿ ಹೊರಮುಖವಾಗಿರುತ್ತದೆ. | ½ | |
| | ★ ಇದು ನೀರಿನಲ್ಲಿ ಎಮಲ್ಷನ್ ಅನ್ನು ಉಂಟು ಮಾಡುತ್ತದೆ. | ½ | |
| | ★ ಹೀಗೆ ಸಾಬೂನಿನ ಮಿಸೆಲ್ ನೀರಿನಲ್ಲಿ ಕೊಳೆಯನ್ನು ಕಿತ್ತು ಹೊರತೆಗೆಯಲು ಸಹಾಯ ಮಾಡುತ್ತದೆ. | ½ | |
| | b) ಕ್ಯಾಲ್ಸಿಯಂ ಲವಣಗಳು ಮತ್ತು ಮೆಗ್ನೀಸಿಯಂ ಲವಣಗಳು ನೀರಿನಲ್ಲಿ ಗಡಸುತನವನ್ನು ಉಂಟುಮಾಡುತ್ತವೆ. | 1 | |
| | ಮಾರ್ಜಕಗಳು ಗಡಸು ನೀರಿನ ಮೆಗ್ನೀಸಿಯಂ ಮತ್ತು ಕ್ಯಾಲ್ಸಿಯಂ ಅಯಾನುಗಳೊಂದಿಗೆ ಜಲ ವಿಲೀನಗೊಳ್ಳದ ಒತ್ತರಗಳನ್ನು ಉಂಟು ಮಾಡುವುದಿಲ್ಲ. ಹೀಗೆ, ಮಾರ್ಜಕಗಳು ಗಡಸು ನೀರಿನಲ್ಲಿಯೂ ಪರಿಣಾಮಕಾರಿಯಾಗಿವೆ. | 1 | 4 |

| A | CCE RF/RR/ PF/PR |
|---|---|

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,

ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SCHOOL EXAMINATION AND ASSESSMENT BOARD,**

**MALLESHWARAM, BENGALURU – 560 003**

**ಮೇ 2026 ರ ಪರೀಕ್ಷೆ - 2**

**MAY 2026 EXAMINATION - 2**

## ಮಾದರಿ ಉತ್ತರಗಳು

## MODEL ANSWERS

ಸಂಕೇತ ಸಂಖ್ಯೆ : **83-K** CODE NO. : **83-K**

## ವಿಷಯ : ವಿಜ್ಞಾನ

## Subject : SCIENCE

(ಭೌತ ವಿಜ್ಞಾನ, ರಸಾಯನ ವಿಜ್ಞಾನ ಮತ್ತು ಜೀವ ವಿಜ್ಞಾನ / **Physics, Chemistry & Biology**)

(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)

(**Regular Fresh / Regular Repeater / Private Fresh / Private Repeater**)

(ಕನ್ನಡ ಮಾಧ್ಯಮ / **Kannada Medium**)

(ಜೀವ ವಿಜ್ಞಾನ / **Biology**)

ದಿನಾಂಕ : 19. 05. 2026 ] [ ಗರಿಷ್ಠ ಅಂಕಗಳು : 80

Date : 19. 05. 2026 ] [ Max. Marks : 80

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | **ಭಾಗ – C**<br>**( ಜೀವ ವಿಜ್ಞಾನ )** | |
| **XI.** | ಬಹು-ಆಯ್ಕೆ ಪ್ರಶ್ನೆಗಳು : **3 × 1 = 3** | |
| 26. | ಮೂತ್ರಪಿಂಡದ ರಚನಾತ್ಮಕ ಮತ್ತು ಕಾರ್ಯಾತ್ಮಕ ಮೂಲ ಘಟಕಗಳು<br>(A) ನ್ಯೂರಾನ್ (B) ನೆಫ್ರಾನ್<br>(C) ಕೋಶಕಾಯ (D) ಸ್ನಾಯು ಕೋಶ<br>*ಉತ್ತರ :* (B) ನೆಫ್ರಾನ್ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 27. | ಮಾನವರಲ್ಲಿ ಲೈಂಗಿಕ ಸಂಪರ್ಕದಿಂದ ಸಾಮಾನ್ಯವಾಗಿ ಹರಡುವ ಬ್ಯಾಕ್ಟೀರಿಯಾ ಸೋಂಕು<br>(A) ಗೊನೋರಿಯ<br>(B) ಏಡ್ಸ್<br>(C) ಹೆಪಟೈಟಿಸ್–ಬಿ<br>(D) ಪ್ರಜನನಾಂಗದ ಮೇಲಿನ ಗುಳ್ಳೆಗಳು (ವಾರ್ಟ್ಸ್)<br>**ಉತ್ತರ :** (A) ಗೊನೋರಿಯ | 1 |
| 28. | ಯುಗ್ಮಜವೊಂದರಲ್ಲಿ 23 ಜೊತೆ ವರ್ಣತಂತುಗಳಿವೆ. ಹಾಗಾದರೆ, ಪೋಷಕ ಜೀವಿಯ ಸಾಮಾನ್ಯ ಕೋಶವೊಂದರಲ್ಲಿ ಇರುವ ವರ್ಣತಂತುಗಳ ಸಂಖ್ಯೆ<br>(A) 24 (B) 23<br>(C) 46 (D) 12 ಜೊತೆ<br>**ಉತ್ತರ :** (C) 46 | 1 |
| **XII.** | **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 3 × 1 = 3** | |
| 29. | ಮೂವರು ವ್ಯಕ್ತಿಗಳ ಹಿಮೋಗ್ಲೋಬಿನ್ ಪ್ರಮಾಣವನ್ನು ತೋರಿಸುವ ರಕ್ತ ಪರೀಕ್ಷೆಯ ವರದಿಯ ಭಾಗವನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ : | |

| ವ್ಯಕ್ತಿಗಳು | ಹಿಮೋಗ್ಲೋಬಿನ್ ( g/dL ) |
|---|---|
| *A* | 11·1 |
| *B* | 12·0 |
| *C* | 13·3 |

ಈ ವರದಿಯ ಆಧಾರದ ಮೇಲೆ ಯಾವ ವ್ಯಕ್ತಿಯ ದೇಹವು ಹೆಚ್ಚಿನ ಆಕ್ಸಿಜನ್ ಅನ್ನು ಸ್ವೀಕರಿಸುವುದು ?

**ಉತ್ತರ :**

★ 'C' ವ್ಯಕ್ತಿ ½

★ ರಕ್ತದಲ್ಲಿನ ಹೆಚ್ಚಿನ ಹಿಮೋಗ್ಲೋಬಿನ್, ಹೆಚ್ಚಿನ ಆಕ್ಸಿಜನ್ ಸಾಗಾಣಿಕೆಯನ್ನು ಸಾಧ್ಯವಾಗಿಸುತ್ತದೆ. ½ — 1

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 30. | ಬೀಜದ ಮೊಳಕೆಯ ಬೆಳವಣಿಗೆಯನ್ನು ಅಧ್ಯಯನ ಮಾಡುವಾಗ, ಆ ಬೀಜದ ಮೊಳಕೆಯನ್ನು ಚಿತ್ರದಲ್ಲಿ ತೋರಿಸಿರುವಂತೆ ಇರಿಸಲಾಗಿದೆ. ‘*X*’ ಎಂದು ಗುರುತಿಸಲಾದ ಭಾಗವು ಯಾವ ರೀತಿಯ ಬೆಳವಣಿಗೆಯನ್ನು ತೋರಿಸುತ್ತದೆ ? ಏಕೆ ? | |




***ಉತ್ತರ :***

★ *X* — ಕೆಳಮುಖವಾಗಿ ಭೂಮಿಯ ಕಡೆಗೆ ಬೆಳೆಯುತ್ತದೆ. ½

★ ಪ್ರಥಮ ಮೂಲ ‘*X*’ ಧನ ಗುರುತ್ವಾನುವರ್ತನೆಯನ್ನು ತೋರಿಸುತ್ತದೆ. ಆದ್ದರಿಂದ ಬಾಗುತ್ತದೆ ಮತ್ತು ಭೂಮಿಯ ಕಡೆಗೆ ಬೆಳೆಯುತ್ತದೆ. ½ — 1

31. ಕೆಳಗೆ ಕೊಟ್ಟಿರುವ ‘*A*’ ಮತ್ತು ‘*B*’ ಹೂವಿನ ಚಿತ್ರಗಳನ್ನು ಗಮನಿಸಿ, ಯಾವ ಹೂವು ಕೇವಲ ಪರಕೀಯ ಪರಾಗಸ್ಪರ್ಶಕ್ಕೆ ಒಳಗಾಗುತ್ತದೆ ? ನಿಮ್ಮ ಉತ್ತರವನ್ನು ಸಮರ್ಥಿಸಿ.



*A* *B*

***ಉತ್ತರ :***

★ ‘*B*’ ಹೂವು ಪರಕೀಯ ಪರಾಗಸ್ಪರ್ಶಕ್ಕೆ ಮಾತ್ರ ಒಳಗಾಗುತ್ತದೆ. ½

★ ‘*B*’ ಹೂವಿನಲ್ಲಿ ಕೇಸರಗಳು ಇಲ್ಲ. ಆದ್ದರಿಂದ ಅದು ಕೇವಲ ಪರಕೀಯ ಪರಾಗಸ್ಪರ್ಶಕ್ರಿಯೆಗೆ ಒಳಪಡಬೇಕು. ½ — 1

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XIII. | **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 2 × 2 = 4** | |
| 32. | ಓಟಕ್ಕೆ ತಯಾರಾಗಲು ಅಡ್ರಿನಲಿನ್ ಹಾರ್ಮೋನ್ ಕ್ರೀಡಾಪಟುವಿಗೆ ಹೇಗೆ ಸಹಾಯ ಮಾಡುತ್ತದೆ ?<br>**ಅಥವಾ**<br>ಒಂದು ಆಧಾರದ ಸುತ್ತ ಸಸ್ಯದ ಬಳ್ಳಿ ಕುಡಿಗಳ ಬೆಳವಣಿಗೆಯನ್ನು ಆಕ್ಸಿನ್‌ಗಳು ಹೇಗೆ ಉತ್ತೇಜಿಸುತ್ತವೆ ?<br>***ಉತ್ತರ :***<br>i) ಅಡ್ರಿನಲಿನ್ ಹೃದಯದ ಬಡಿತದ ದರವನ್ನು ಹೆಚ್ಚಿಸುವುದು. ಇದರಿಂದ ಸ್ನಾಯುಗಳಿಗೆ ಹೆಚ್ಚಿನ ಆಕ್ಸಿಜನ್ ಪೂರೈಕೆಯಾಗುತ್ತದೆ. 1<br>ii) ಇದು ಕಾಲಿನ ರಕ್ತನಾಳಗಳನ್ನು ಹಿಗ್ಗಿಸುವುದರಿಂದ ಜಠರಕ್ಕೆ ಪೂರೈಕೆಯಾಗುವ ರಕ್ತವು ಕಾಲಿನ ಸ್ನಾಯುಗಳಿಗೆ ಪೂರೈಕೆಯಾಗುವಂತೆ ಮಾಡುತ್ತದೆ.<br>ಇದರಿಂದಾಗಿ ಕ್ರೀಡಾಪಟುವಿಗೆ ಹೆಚ್ಚಿನ ಶಕ್ತಿ ದೊರಕುವುದು. 1 | 2 |
| | **ಅಥವಾ**<br>★ ಮೇಲೇರುವ ಸಸ್ಯಗಳ ಬಳ್ಳಿ ಕುಡಿಗಳು ಸ್ಪರ್ಶಕ್ಕೆ ಸೂಕ್ಷ್ಮವಾಗಿರುತ್ತವೆ. ½<br>★ ಯಾವುದೇ ಆಧಾರದ ಸಂಪರ್ಕಕ್ಕೆ ಬಂದಾಗ, ಆಧಾರದೊಂದಿಗೆ ಸಂಪರ್ಕದಲ್ಲಿರುವ ಕುಡಿಯ ಭಾಗವು ದೂರವಿರುವ ಕುಡಿಯ ಭಾಗದಷ್ಟು ವೇಗವಾಗಿ ಬೆಳೆಯುವುದಿಲ್ಲ. 1<br>★ ಇದರಿಂದಾಗಿ ಕುಡಿಯು ಆಧಾರದ ಸುತ್ತ ವೃತ್ತಾಕಾರದಲ್ಲಿ ಆವರಿಸಿ ಅದಕ್ಕೆ ಅಂಟಿಕೊಳ್ಳುತ್ತದೆ. ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 33. | ತೆರೆದ ಪತ್ರರಂಧ್ರದ ರಚನೆಯನ್ನು ತೋರಿಸುವ ಚಿತ್ರ ಬರೆಯಿರಿ ಮತ್ತು ಕೆಳಗಿನ ಭಾಗಗಳನ್ನು ಗುರುತಿಸಿ :<br>i) ಕಾವಲು ಕೋಶಗಳು<br>ii) ಕ್ಲೋರೋಪ್ಲಾಸ್ಟ್<br>***ಉತ್ತರ :***<br><br><br>ಚಿತ್ರಕ್ಕೆ — 1<br>ಭಾಗಕ್ಕೆ — ½ + ½ | 2 |
| **XIV.** | **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : 3 × 3 = 9** | |
| 34. | ಜೈವಿಕ ವಿಘಟನೆಗೆ ಒಳಗಾಗುವ ಮತ್ತು ಜೈವಿಕ ವಿಘಟನೆಗೆ ಒಳಗಾಗದ ವಸ್ತುಗಳ ನಡುವಣ ವ್ಯತ್ಯಾಸಗಳನ್ನು ಉದಾಹರಣೆ ಸಹಿತ ಬರೆಯಿರಿ.<br>**ಅಥವಾ**<br>ಹಾವು, ಕಪ್ಪೆ, ಹುಲ್ಲು ಮತ್ತು ಮಿಡತೆ; ಈ ಜೀವಿಗಳನ್ನು ಬಳಸಿಕೊಂಡು ಆಹಾರ ಸರಪಳಿಯನ್ನು ರಚಿಸಿ. ಈ ಆಹಾರ ಸರಪಳಿಯಲ್ಲಿ ಯಾವ ಜೀವಿಯು ಅತಿ ಹೆಚ್ಚಿನ ಪ್ರಮಾಣದಲ್ಲಿ ಹಾನಿಕಾರಕ ರಾಸಾಯನಿಕಗಳ ಸಂಗ್ರಹವನ್ನು ಹೊಂದಿದೆ ? ಏಕೆ ?<br>***ಉತ್ತರ :*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

| ಜೈವಿಕ ವಿಘಟನೆಗೆ ಒಳಗಾಗುವ ವಸ್ತುಗಳು | ಜೈವಿಕ ವಿಘಟನೆಗೆ ಒಳಗಾಗದ ವಸ್ತುಗಳು |
|---|---|
| ★ ಜೈವಿಕ ಪ್ರಕ್ರಿಯೆಯಿಂದ ವಿಘಟನೆಗೆ ಒಳಗಾಗುತ್ತವೆ. | ★ ಜೈವಿಕ ಪ್ರಕ್ರಿಯೆಯಿಂದ ವಿಘಟನೆಗೆ ಒಳಗಾಗುವುದಿಲ್ಲ. |
| ★ ಪರಿಸರದಲ್ಲಿ ದೀರ್ಘಕಾಲದವರೆಗೆ ಹಾಗೆಯೇ ಉಳಿಯುವುದಿಲ್ಲ | ★ ಪರಿಸರದಲ್ಲಿ ದೀರ್ಘಕಾಲದವರೆಗೆ ಹಾಗೆಯೇ ಉಳಿದು ಬಿಡುತ್ತವೆ. |
| ★ ಕಡಿಮೆ ಹಾನಿಕಾರಕ | ★ ಹೆಚ್ಚು ಹಾನಿಕಾರಕ |
| ★ ಕಡಿಮೆ ಮಾಲಿನ್ಯಕಾರಕ | ★ ಹೆಚ್ಚು ಮಾಲಿನ್ಯಕಾರಕ |

(ಯಾವುದಾದರೂ ಎರಡು) 2

| | |
|---|---|
| *ಉದಾಹರಣೆಗಳು :* ಸಗಣಿ, ತರಕಾರಿ ಸಿಪ್ಪೆ, ಹಣ್ಣುಗಳು. (ಯಾವುದಾದರೂ ಒಂದು ಸೂಕ್ತ ಉದಾಹರಣೆ) | *ಉದಾಹರಣೆಗಳು :* DDT, ಪ್ಲಾಸ್ಟಿಕ್, ಲೋಹದ ತ್ಯಾಜ್ಯ. (ಯಾವುದಾದರೂ ಒಂದು ಸೂಕ್ತ ಉದಾಹರಣೆ) |

1 3

**ಅಥವಾ**

ಆಹಾರ ಸರಪಳಿ :

ಹುಲ್ಲು → ಮಿಡತೆ → ಕಪ್ಪೆ → ಹಾವು 1

ಹಾವಿನಲ್ಲಿ ಅತಿ ಹೆಚ್ಚು ವಿಷಕಾರಿ ರಾಸಾಯನಿಕಗಳು ಸಂಗ್ರಹವಾಗಿರುತ್ತವೆ. 1

ಜೈವಿಕ ಸಂವರ್ಧನೆಯಿಂದ, ವಿಷಯುಕ್ತ ರಾಸಾಯನಿಕಗಳು ಪ್ರತಿ ಪೋಷಣಾಸ್ತರದಲ್ಲೂ ಹೆಚ್ಚುತ್ತಾ ಹೋಗುತ್ತವೆ. ಇಲ್ಲಿ ಹಾವು, ಕೊನೆಯ ಪೋಷಣಾಸ್ತರಕ್ಕೆ ಸೇರಿರುವುದರಿಂದ ಅದರಲ್ಲಿ ಗರಿಷ್ಠ ಮಟ್ಟದ ರಾಸಾಯನಿಕಗಳು ಸಂಗ್ರಹಗೊಂಡಿರುತ್ತವೆ. 1

ಅಥವಾ

ಜೈವಿಕ ಸಂವರ್ಧನೆಯಿಂದ ಹಾವಿನಲ್ಲಿ ಗರಿಷ್ಠ ಪ್ರಮಾಣದ ವಿಷಯುಕ್ತ ರಾಸಾಯನಿಕಗಳು ಸಂಗ್ರಹಗೊಂಡಿರುತ್ತವೆ. 3

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|

35. ಹಳದಿ ಬೀಜಗಳನ್ನು ಉತ್ಪಾದಿಸುವ ( *YY* ) ಬಟಾಣಿ ಸಸ್ಯವನ್ನು ಹಸಿರು ಬೀಜಗಳನ್ನು ಉತ್ಪಾದಿಸುವ ( *yy* ) ಬಟಾಣಿ ಸಸ್ಯದೊಂದಿಗೆ ಅಡ್ಡಹಾಯಿಸಲಾಗಿದೆ. ಚಕ್ಕರ್ ಬೋರ್ಡ್‌ನ ಸಹಾಯದಿಂದ $F_2$ ಪೀಳಿಗೆಯಲ್ಲಿ ದೊರೆತ ಫಲಿತಾಂಶಗಳನ್ನು ತೋರಿಸಿ. ಇಲ್ಲಿ ಉಂಟಾದ ಸಸ್ಯಗಳ ವ್ಯಕ್ತರೂಪ ಮತ್ತು ಜೀನ್ ನಮೂನೆ ಅನುಪಾತವನ್ನು ತಿಳಿಸಿ.

***ಉತ್ತರ :***

★ $F_2$ ಪೀಳಿಗೆ

| ಲಿಂಗಾಣುಗಳು | *Y* | *y* |
|---|---|---|
| *Y* | *YY* | *Yy* |
| *y* | *Yy* | *yy* |

2

ವ್ಯಕ್ತರೂಪದ ಅನುಪಾತ = ಹಳದಿ : ಹಸಿರು

3 : 1 ½

ಜೀನ್ ನಮೂನೆ ಅನುಪಾತ = ಶುದ್ಧ ಹಳದಿ : ಮಿಶ್ರ ಹಳದಿ : ಶುದ್ಧ ಹಸಿರು

1 : 2 : 1 ½ 3

36. ಮಾನವನ ಮಿದುಳಿನ ರಚನೆಯನ್ನು ತೋರಿಸುವ ಚಿತ್ರವನ್ನು ಬರೆಯಿರಿ. ಕೆಳಗಿನ ಭಾಗಗಳನ್ನು ಗುರುತಿಸಿ :

i) ಮಹಾಮಸ್ತಿಷ್ಕ

ii) ಪಾನ್ಸ್

***ಉತ್ತರ :***

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|




ಚಿತ್ರಕ್ಕೆ — 2

ಭಾಗಗಳಿಗೆ - ½ + ½ — 3

**XV.** **ಕೆಳಗಿನ ಪ್ರಶ್ನೆಗೆ ಉತ್ತರಿಸಿ :** **1 × 4 = 4**

37. a) ಮಾನವನ ಜೀರ್ಣನಾಳದಲ್ಲಿ ಕೆಳಗಿನ ಕಿಣ್ವಗಳ ಪಾತ್ರವೇನು ?

i) ಟ್ರಿಪ್ಸಿನ್

ii) ಅಮೈಲೇಸ್

iii) ಲೈಪೇಸ್

b) ಬಾಷ್ಪವಿಸರ್ಜನೆ ಎಂದರೇನು ?

***ಉತ್ತರ :***

a) *ಕಿಣ್ವಗಳ ಪಾತ್ರ :*

i) ಟ್ರಿಪ್ಸಿನ್ : ಪ್ರೋಟೀನ್‌ಗಳನ್ನು ಜೀರ್ಣಿಸುತ್ತದೆ. 1

ii) ಅಮೈಲೇಸ್ : ಪಿಷ್ಠವನ್ನು ವಿಭಜಿಸಿ ಸಕ್ಕರೆಯನ್ನು ಉಂಟು ಮಾಡುತ್ತದೆ. 1

iii) ಲೈಪೇಸ್ : ಎಮಲ್ಸೀಕರಣಗೊಂಡ ಕೊಬ್ಬುಗಳನ್ನು ವಿಭಜಿಸುತ್ತದೆ. 1

b) ಬಾಷ್ಪವಿಸರ್ಜನೆ :

ಗಾಳಿಗೆ ತೆರೆದ ಸಸ್ಯದ ಭಾಗಗಳಿಂದ ಆವಿಯ ರೂಪದಲ್ಲಿ ನೀರು ನಷ್ಟವಾಗುವುದನ್ನು ಬಾಷ್ಪವಿಸರ್ಜನೆ ಎನ್ನುವರು. 1 — 4

**XVI.** **ಕೆಳಗಿನ ಪ್ರಶ್ನೆಗೆ ಉತ್ತರಿಸಿ :** **1 × 5 = 5**

38. a) ಮಾನವ ಪುರುಷ ಸಂತಾನೋತ್ಪತ್ತಿ ವ್ಯೂಹದಲ್ಲಿ ವೀರ್ಯನಾಳ ಮತ್ತು ಪ್ರೋಸ್ಟೇಟ್ ಗ್ರಂಥಿಯ ಕಾರ್ಯಗಳನ್ನು ಪಟ್ಟಿ ಮಾಡಿ.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | b) ನಿಶೇಚನದ ನಂತರ ಹೂವಿನಲ್ಲಾಗುವ ಬದಲಾವಣೆಗಳೇನು ? | |
| | **ಅಥವಾ** | |
| | a) ಹೈಡ್ರಾ ಮತ್ತು ಪ್ಲನೇರಿಯಾಗಳಲ್ಲಿ ಸಂತಾನೋತ್ಪತ್ತಿ ಪ್ರಕ್ರಿಯೆಗಳು ಹೇಗೆ ಭಿನ್ನವಾಗಿವೆ ? ವಿವರಿಸಿ. | |
| | b) ಸ್ತ್ರೀಯರಲ್ಲಿ ಫಲಿತಗೊಂಡ ಅಂಡವನ್ನು ಬರಮಾಡಿಕೊಳ್ಳಲು ಗರ್ಭಕೋಶವು ಹೇಗೆ ಸಿದ್ಧವಾಗುತ್ತದೆ ? ಅಂಡವು ಫಲಿತಗೊಳ್ಳದಿದ್ದರೆ ಏನಾಗುತ್ತದೆ ? ವಿವರಿಸಿ. | |
| | ***ಉತ್ತರ :*** | |
| | a) *ಕಾರ್ಯಗಳು :* | |
| | i) *ವೀರ್ಯನಾಳ :* ವೀರ್ಯಾಣುಗಳನ್ನು ಇದು ಮೂತ್ರವಿಸರ್ಜನಾ ನಾಳ (ಯುರಿಥ್ರಾ) ಕ್ಕೆ ಸಾಗಿಸುತ್ತದೆ. 1 | |
| | ii) *ಪ್ರೋಸ್ಟೇಟ್ ಗ್ರಂಥಿ :* ಪ್ರೋಸ್ಟೇಟ್ ಗ್ರಂಥಿಯು ಉತ್ಪಾದಿಸಿದ ಸ್ರವಿಕೆಯು ವೀರ್ಯಾಣುಗಳ ಸಾಗಾಣಿಕೆಗೆ ಸಹಾಯ ಮಾಡುತ್ತದೆ ಮತ್ತು ವೀರ್ಯಾಣುಗಳಿಗೆ ಪೋಷಣೆಯನ್ನು ಒದಗಿಸುತ್ತದೆ. 1 | |
| | b) ನಿಶೇಚನದ ನಂತರ, | |
| | ★ ಅಂಡಾಣುವಿನ ಒಳಗೆ ಯುಗ್ಮಜವು ಹಲವು ಬಾರಿ ವಿಭಜನೆಗೊಂಡು ಭ್ರೂಣವನ್ನು ಉಂಟುಮಾಡುತ್ತದೆ. 1 | 5 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ★ ಅಂಡಾಣುವು ಒರಟಾದ ಪದರವನ್ನು ಬೆಳೆಸಿಕೊಂಡು ನಿಧಾನವಾಗಿ ಬೀಜವಾಗಿ ಪರಿವರ್ತನೆಗೊಳ್ಳುತ್ತದೆ. 1 | |
| | ★ ಅಂಡಾಶಯದ ಕ್ಷಿಪ್ರವಾಗಿ ಬೆಳೆದು ಮಾಗಿ, ಹಣ್ಣಾಗುತ್ತದೆ. ½ | |
| | ★ ಹೂವಿನ ಇತರ ಭಾಗಗಳು – ಪುಷ್ಪದಳ, ಪುಷ್ಪಪತ್ರ, ಕೇಸರಗಳು, ಶಲಾಕನಳಿಕೆ ಮತ್ತು ಶಲಾಕಾಗ್ರಗಳು – ಸುಕ್ಕಾಗಿ ಉದುರಿ ಹೋಗುತ್ತವೆ. ½ | |
| | **ಅಥವಾ** | |
| | a) ಹೈಡ್ರಾದಲ್ಲಿ : | |
| | ★ ಪುನರಾವರ್ತಿತ ಕೋಶವಿಭಜನೆಯಿಂದ ಒಂದು ನಿರ್ದಿಷ್ಟ ಭಾಗದಲ್ಲಿ ಒಂದು ಮೊಗ್ಗು ಬಾಹ್ಯ ವೃದ್ಧಿಯಾಗಿ ಬೆಳೆಯುತ್ತದೆ. (ಮೊಗ್ಗುವಿಕೆ) ½ | |
| | ★ ಮೊಗ್ಗುಗಳು ಬೆಳೆದು ಪ್ರೌಢವಾದ ನಂತರ ಮಾತ್ರ ದೇಹದಿಂದ ಪ್ರತ್ಯೇಕಗೊಳ್ಳುತ್ತವೆ. ½ | |
| | ಪ್ಲನೇರಿಯಾದಲ್ಲಿ : | |
| | ★ ವಿಶಿಷ್ಟ ಕೋಶಗಳು ವೃದ್ಧಿಯಾಗಿ ಅಸಂಖ್ಯಾತ ಕೋಶಗಳನ್ನು ಉಂಟುಮಾಡುತ್ತವೆ. ಇವುಗಳು ಬದಲಾವಣೆಗೊಳಗಾಗಿ ವಿವಿಧ ಜೀವಕೋಶಗಳು ಮತ್ತು ಅಂಗಾಂಶಗಳಾಗುತ್ತವೆ. (ಪುನರುತ್ಪಾದನೆ) ½ | |
| | ★ ಸಂಘಟಿತ ಅನುಕ್ರಮದಲ್ಲಿ ನಡೆಯುವ ಈ ಬದಲಾವಣೆಗಳನ್ನು ಅಭಿವರ್ಧನೆ ಎನ್ನುವರು. ½ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | b) ★ ಗರ್ಭಕೋಶವು ಫಲಿತ ಅಂಡವನ್ನು ಬರಮಾಡಿಕೊಳ್ಳಲು ಪ್ರತಿ ತಿಂಗಳು ತನ್ನನ್ನು ತಾನೇ ಸಜ್ಜುಗೊಳಿಸಿಕೊಳ್ಳುತ್ತದೆ. ½ | |
| | ★ ಭ್ರೂಣಕ್ಕೆ ಅಗತ್ಯವಾದ ಪೋಷಣೆ ನೀಡಲು ಗರ್ಭಕೋಶದ ಒಳಸ್ತರಿಯು ದಪ್ಪವಾಗಿ ಸ್ಪಂಜಿನಂತಾಗುತ್ತದೆ. ½ | |
| | ಅಂಡವು ಫಲಿತಗೊಳ್ಳದಿದ್ದರೆ, | |
| | ★ ಗರ್ಭಕೋಶದ ಒಳಸ್ತರಿಯು ನಿಧಾನವಾಗಿ ಬಿರುಕು ಬಿಟ್ಟು ರಕ್ತ ಮತ್ತು ಲೋಳೆಯ ರೂಪದಲ್ಲಿ ಯೋನಿಯಿಂದ ಹೊರ ಬರುತ್ತದೆ. ½ + ½ | |
| | ★ ಸರಿಸುಮಾರು ಪ್ರತಿ ತಿಂಗಳು ನಡೆಯುವ ಇದನ್ನು ಋತುಚಕ್ರ ಎನ್ನುವರು. ½ | |
| | ★ ಸಾಮಾನ್ಯವಾಗಿ ಇದು ಎರಡರಿಂದ ಎಂಟು ದಿನಗಳವರೆಗೆ ಮುಂದುವರೆಯುತ್ತದೆ. ½ | 5 |